ಶ್ರೀ ಆರ್. ಗುಂಡೂರಾವ್.—ನಾನು ಮೊದಲೇ ಹೇಳಿದ ಹಾಗೆ ಕೃಷ್ಣಾ ಪ್ರಾಜೆಕ್ಟ್‌ನಿಂದ ಡೈವರ್ಷನ್ ಮಾಡಿ ಭದ್ರಾ ಪ್ರಾಜೆಕ್ಟ್‌ನಿಂದ ನಿಮ್ಮ ಭಾಗಕ್ಕೆ ನೀರು ಒದಗಿಸಿಕೊಡಲಂ ಇನ್‌ವೆಸ್ಟಿಗೇಷನ್ ಕೆಲಸ ಆಗುತ್ತಾ ಇದೆ. ಕೃಷ್ಣಾ ಪ್ರಾಜೆಕ್ಟ್‌ನಲ್ಲೂ ಹೆಚ್ಚು ನೀರು ಇದ್ದು ಕಾವೇರಿ ಬೇಸಿನ್‌ನಿಂದ ನೀರು ಒದಗಿಸುವುದಕ್ಕೆ ಏನೂ ತೊಂದರೆ ಇಲ್ಲದೇ ಇದ್ದರೆ ಅದರಲ್ಲೂ ಒದಗಿಸಿಕೊಡುತ್ತೇವೆ, ನಮ್ಮ ಅಭ್ಯಂತರ ಏನೂ ಇಲ್ಲ. ಈ ಕೆಲಸಗಳನ್ನೆಲ್ಲಾ ಆದಷ್ಟು ಜಾಗ್ರತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ.—ಸ್ವಾಮಿ, ಹಿಂದೆ ಮಾನ್ಯ ಸಚಿವರು ಶ್ರೀ ಬಸವಯ್ಯನವರು ಇದ್ದಾಗ ಸರ್ಕಾರದ ವತಿಯಿಂದಲೇ ಈ ಬಗ್ಗೆ ಒಂದು ಸಭೆ ಕರೆದು ಈ ವಿಷಯದಲ್ಲಿ ಕೂಲಂಕಷವಾಗಿ ಚರ್ಚೆ ನಡೆಸಿ, ಇದು ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅಲ್ಲಿಗೆ ಏನಾದರೂ ಮಾಡಿ ಈ ಕೆಲಸ ಮಾಡಿಕೊಡ ಬೇಕು ಎನ್ನುವ ಒಂದು ಕಾಳಜಿ ಮಾಡಿದ್ದರು ಆದುದರಿಂದ ನಾನು ಈವಾಗ ತಮ್ಮನ್ನು ಕೇಳುವುದು ಇಷ್ಟೆ, ಈ ಹೇಮಾವತಿ ನೀರು ಅಲ್ಲಿಗೆ ಬಂದರೆ ಇದರಿಂದ ೩ ತಾಲ್ಲೂಕುಗಳಿಗೆ ಬಹಳ ಅನುಕೂಲವಾಗುತ್ತದೆ. ಈ ಕೆಲಸವನ್ನಾದರೂ ಸರ್ಕಾರ ಮಾಡಿಕೊಡುತ್ತದೆ ಅನ್ನುವ ಒಂದು ಆಶ್ವಾಸನೆಯನ್ನು ಕೊಡುತ್ತದೆಯೇ ?

ಶ್ರೀ ಆರ್. ಗುಂಡೂರಾವ್.—ಆ ಬಗ್ಗೆ ಉತ್ತರವನ್ನು ಮೊದಲೇ ಹೇಳಿದ್ದೇನೆ. I am very clear in that matter.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೆಗಳು ಮುಗಿದವು.

QUESTIONS FOR ANSWERS ON THE DAY
(but not taken up)

Decentralisation of Powers among Taluk Boards and Village Panchayats.

278. SRI M.C. BASAPPA (Chamarajanagar). —Will the Minister for Rural Development and Panchayat Raj be pleased to state:-

(a) whether it is a fact that the Government has taken a decision to decentralise power and give more powers to the Taluk Boards and Village Panchayats;

(b) if so, the steps taken by the Government in that direction ;

(c) whether necessary funds have been provided to these local bodies to take up this responsibility ?

SRI B. RAMAIAH. —(Minister for Rural Development and Panchayat Raj).—

(a) Yes.

(b) Government is actively reviewing it.

(c) Does not arise in view of reply furnished to 'b' above.